**CC No: 254/2019**
**PW:1**

**(ದಿನಾಂಕ: 12-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಖ್ಯ ವಿಚಾರಣೆ:</u> ಶ್ರೀ. ಎಸ್. ಎನ್. ಎಸ್. ಪಿರ್ಯಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು, ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸತ್ಯದಿಂದ ಕೂಡಿವೆ. ಅದನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಿಃ 22-03-2018 ರಂದು ಆರೋಪಿತನು ನೀಡಿದ ಚಕನ್ನು ನಿಪಿ-1 ಎಂದು, ಆರೋಪಿತನ ಸಹಿಯನ್ನು ನಿಪಿ-1(ಎ) ಎಂದು, ಕೆನರಾ ಬ್ಯಾಂಕರವರು ನೀಡಿದ ಮೆಮೋವನ್ನು ನಿಪಿ-2 ಎಂದು, ಬ್ಯಾಂಕನವರು ನೀಡಿದ ಕೌಂಟರ್ ಪಾವತಿಯನ್ನು ನಿಪಿ-3 ಎಂದು, ಲೀಗಲ್ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-4 ಎಂದು, ಅಂಚೆ ರಸೀದಿಯನ್ನು ನಿಪಿ-5 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ-6 ಎಂದು, ಆರೋಪಿತನ ಸಹಿಯನ್ನು ನಿಪಿ-6 (ಎ) ಎಂದು ಗುರುತಿಸಲಾಯಿತು. ಅದ್ದರಿಂದ ಆರೋಪಿತನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿಕೊಳ್ಳುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**

**-Sd-**
**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**